and Hindi, some times the visitors and passengers are being put to trouble, embarrassment and mis-information. Besides the poor quality of the Sound system and announcements also add to the inconvenience to the people. Whereas in the metropolitan cities like Madras, Delhi, Calcutta and even in other cities like Trivandrum, all the announcements are first made in the respective regional language and then in English and Hindi which enables all sections of people to understand information about the arrivals, departures etc., the airport authorities of Bangalore have not made arrangements for announcements in Kannada Language. Hence I appeal to the State Government to take necessary action for making announcements in the Kannada Language in the interest of the people of Karnataka and also to improve the quality of sound system and announcements.

Mr. Speaker: May I commend you, Mr. Fullinfaw, for taking up the cause of Kannada. I think the Government should take it up with the Indian Airlines Corporation. ಮದ್ರಾಸಿನಲ್ಲಿ ತಮಿಳಿನಲ್ಲಿ ಹೇಳುತ್ತಾರೆ. ಹಿಂದಿಯಲ್ಲಿ ಹೇಳುತ್ತಾರೆ, ಇಂಗ್ಲೀಷಿನಲ್ಲಿ ಸಹ ಹೇಳುತ್ತಾರೆ. ಇಲ್ಲಿ ಕನ್ನಡದಲ್ಲಿ ಏತಕ್ಕೆ ಹೇಳಬಾರದು?

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಬೆಂಗಳೂರು ವಿಮಾನ ನಿಲ್ದಾಣವನ್ನು ಭಾರತ ಸರ್ಕಾರದಿಂದ ರಚಿಸಲ್ಪಟ್ಟಿರುವ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರವು ನೋಡಿಕೊಳ್ಳುತ್ತಿದೆ ಹಾಗೂ ಅದರ ಆಡಳಿತದ ಯಾವ ಭಾಗವು ರಾಜ್ಯ ಸರ್ಕಾರದ ವಶದಲ್ಲಿಲ್ಲ. ಆದಾಗ್ಯೂ, ಕನ್ನಡದಲ್ಲಿ ನಿವೇದನೆಗಳನ್ನು/ಘೋಷಣೆಗಳನ್ನು ಮಾಡುವ ಬಗ್ಗೆ ವ್ಯವಸ್ಥೆ ಮಾಡಲಾಗಿದೆ ಹಾಗೂ ಅಂತಹ ನಿವೇದನೆ/ಘೋಷಣೆಗಳನ್ನು ನಿಜವಾಗಿಯೂ ಮಾಡಲಾಗುತ್ತಿದೆಯೆಂಬ ಬಗ್ಗೆ ವಿಮಾನ ನಿಲ್ದಾಣ ನಿರ್ದೇಶಕರು, ಬೆಂಗಳೂರು ವಿಮಾನ ನಿಲ್ದಾಣ ಇವರಿಂದ ತಿಳಿದುಕೊಳ್ಳಲಾಗಿದೆ. ಮೊದಲು ಕನ್ನಡ, ನಂತರ ಇಂಗ್ಲೀಷ್ ಹಾಗೂ ಹಿಂದಿಯಲ್ಲಿ ನಿವೇದನೆಗಳನ್ನು ಮಾಡಲಾಗುತ್ತಿದೆಯೆಂದು ಸಹ ತಿಳಿದುಕೊಳ್ಳಲಾಗಿದೆ. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ನಿವೇದನೆ/ಘೋಷಣೆಗಳು ಸ್ಪಷ್ಟವಾಗಿ ಕೇಳಿಸುವಂತೆ ಧ್ವನಿ ವ್ಯವಸ್ಥೆಯನ್ನು ಸುಧಾರಿಸುವಂತೆ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಬರೆಯಲು ಕ್ರಮ ಕೈಗೊಳ್ಳಲಾಗುವುದು.

8. ಮೂಡ ಬಿದ್ರೆಯಲ್ಲಿ ಸರ್ಕಾರವು ಸ್ವಾಧೀನ ಪಡಿಸಿಕೊಂಡಿರುವ ಕೈಗಾರಿಕಾ ಷೆಡ್‌ಗಳನ್ನು ವಾಪಸ್ ಮಾಡುವ ಬಗ್ಗೆ :

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಅಧ್ಯಕ್ಷರೇ, ಮೂಡುಬಿದ್ರಿಯ ಕೈಗಾರಿಕಾ ಕೇಂದ್ರಕ್ಕೆ ವಿದ್ಯುತ್ ತೊಂದರೆ, ನೀರಿನ ಅಭಾವ ಇವುಗಳಿಂದಾಗಿ ಇಲ್ಲಿಯ ಕೈಗಾರಿಕೆಗಳು ಸ್ಥಗಿತಗೊಳ್ಳುವ ಪರಿಸ್ಥಿತಿ ಬಂದಿದೆ. ಇಲ್ಲಿಯ ಕೈಗಾರಿಕಾ ಶೆಡ್ಡುಗಳಿಗೆ ನಿಯೋಜಿತ ದರವು ಮಾರ್ಕೆಟ್ ಧಾರಣೆಗಳಿಗಿಂತ ಹೆಚ್ಚಾಗಿದ್ದು ಇದನ್ನು ಕಮ್ಮಿ ಪಡಿಸಲು ಸರ್ಕಾರವು ಒಪ್ಪಿದ್ದು ಈ ದರದಂತೆ ಕಂತುಗಳ ನಿರ್ಣಯವಾಗಿತ್ತು. ಆದರೆ ಈ ಸರ್ಕಾರವು ಇದನ್ನು ಕಾರ್ಯರೂಪಕ್ಕೆ ತಾರದೆ ಹಿಂದಿನ ದರದಲ್ಲಿಯೆ ಹಣ ಪಾವತಿ ಮಾಡುವಂತೆ ಬಲವಂತಪಡಿಸಿ ಕೆಲವು ಕೇಂದ್ರಗಳನ್ನು ತನ್ನ ಸ್ವಾಧೀನಕ್ಕೆ ಪಡೆದಿರುತ್ತದೆ. ಈ ಕುರಿತು ಸೂಕ್ತ ಮನವಿಯನ್ನು ಅರ್ಪಿಸಿದಾಗ ಬೆಂಗಳೂರಿನ ಮ್ಯಾನೇಜಿಂಗ್ ಡೈರೆಕ್ಟರರು ಈ ಕೈಗಾರಿಕಾ ಕೇಂದ್ರದವರ ಮನವಿಯನ್ನು ಒಪ್ಪಿಕೊಂಡು ಸ್ವಾಧೀನಪಡಿಸಿ ಕೊಂಡಿರುವ ಕೇಂದ್ರಗಳನ್ನು ತೆರವು ಮಾಡುವರೆ? ಹುಕುಂ ಕೊಟ್ಟಿರುವುದಾದರೂ ಈ ತನಕ ಸಹ ಸಂಬಂಧಿತ ಕೈಗಾರಿಕೆಗಳನ್ನು ನಡೆಸಲು ಆಸ್ಪದ ಕಲ್ಪಿಸಲಾಗಲಿಲ್ಲ. ಹೀಗಾಗಿ ಈ ಜನರಿಗೆ ಕೂಡಲೇ ಅವರ ಕೈಗಾರಿಕೆಗಳನ್ನು ನಡೆಸಲು ಆಸ್ಪದ ಕಲ್ಪಿಸಬೇಕೆಂದು ವಿನಂತಿಸುತ್ತೇನೆ. ಮಾತ್ರವಲ್ಲದೆ ಹಿಂದಿನ ದರದಲ್ಲಿಯೇ ಅವರಿಂದ ಹಣ ಪಡೆಯುವಂತೆ ವಿನಂತಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಅಬ್ಕಾರಿ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ:

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು 1983–84ನೇ ಇಸವಿಯಲ್ಲಿ

ಮೂಡಬಿದರಿಯಲ್ಲಿ ಕಟ್ಟಿದ 4 'ಸಿ' ಹಾಗೂ 4 'ಡಿ' ಮಾದರಿಯ ಮಳಿಗೆಗಳನ್ನು 1985ರಲ್ಲಿ ಹಾಗೂ ತದನಂತರ ವಿತರಣೆ ಮಾಡಿ ಹಂಚಿಕೆದಾರರ ಸ್ವಾಧೀನಕ್ಕೆ ನೀಡಲಾಗಿದೆ.

ಈ ಕೈಗಾರಿಕಾ ವಸಾಹತುವಿಗೆ ಅಗತ್ಯ ಮೂಲಭೂತ ಸೌಲಭ್ಯಗಳಾದ ನೀರು, ವಿದ್ಯುತ್, ರಸ್ತೆ ಒಳಚರಂಡಿ ವ್ಯವಸ್ಥೆ ಮುಂತಾದವುಗಳನ್ನು ಮೊದಲಿನಿಂದಲೂ ಕಲ್ಪಿಸಲಾಗಿದೆ.

ಇತ್ತೀಚೆಗೆ ನಿಗಮದ ನಿರ್ದೇಶಕರ ಮಂಡಳಿಯ ಆದೇಶದನ್ವಯ ಮಳಿಗೆಯ ಬೆಲೆಯನ್ನು ಪುನರ್ ನಿಗದಿ ಮಾಡಲಾಗಿದ್ದು ಈ ಹಿಂದೆ ನಿರ್ಧರಿಸಿದ ಬೆಲೆಗಿಂತ ಈಗ ನಿರ್ಧರಿಸಲಾಗಿರುವ ಅಂತಿಮ ಬೆಲೆಯು ಸಾಕಷ್ಟು ಕಡಿಮೆಯಾಗಿದ್ದು ಈ ಬೆಲೆಯನ್ನು ಸಂಬಂಧಪಟ್ಟ ಉದ್ದಿಮೆದಾರರಿಗೆ ತಿಳಿಸಲಾಗಿದೆ. ಹಿಂದೆ ತಾತ್ಕಾಲಿಕವಾಗಿ ನಿರ್ಧರಿಸಲಾಗಿದ್ದ ಹಾಗೂ ಈಗ ಅಂತಿಮವಾಗಿ ನಿರ್ಧರಿಸಲಾಗಿರುವ ಬೆಲೆಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಕೆಲವು ಮಳಿಗೆಗಳನ್ನು ವಿತರಣೆದಾರರು ಕೊಡಬೇಕಾಗಿದ್ದ ಕಂತುಗಳು ಹೆಚ್ಚಾಗಿದ್ದರಿಂದ ನಿಗಮದ ಸ್ವಾಧೀನಕ್ಕೆ ವಾಪಸ್ಸು ಪಡೆಯಲಾಗಿದ್ದು ವಿತರಣೆದಾರರು ಅನುಭವಿಸುತ್ತಿರುವ ವಿದ್ಯುತ್ ತೊಂದರೆಯಿಂದಾಗಿ ಅವರಿಗೆ ಬಾಕಿ ಇರುವ ಹಣವನ್ನು ಸುಲಭ ಕಂತುಗಳಲ್ಲಿ ಮರು ಪಾವತಿ ಮಾಡಲು ಅವಕಾಶ ನೀಡಲಾಗಿದೆಯಲ್ಲದೆ ಮಳಿಗೆಗಳನ್ನು ಅವರ ಸ್ವಾಧೀನಕ್ಕೆ ವಾಪಸ್ಸು ನೀಡಲು ಸಂಬಂಧ ಪಟ್ಟ ಶಾಖಾಧಿಕಾರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

ಇಲ್ಲಿನ ವಿತರಣೆದಾರರು ವಿದ್ಯುತ್ ಸರಬರಾಜಿನಲ್ಲಿನ ಕಡಿಮೆ ವೋಲ್ಟೇಜ್ ಬಗ್ಗೆ ತೊಂದರೆ ಅನುಭವಿಸುತ್ತಿರುವುದಾಗಿ ದೂರು ಸಲ್ಲಿಸಿದ್ದು, ಈ ಬಗ್ಗೆ ಸೂಕ್ತ ಕ್ರಮವನ್ನು ಆದಷ್ಟು ಬೇಗನೆ ತೆಗೆದುಕೊಳ್ಳಬೇಕೆಂದು ಕೆ.ಇ.ಬಿ. ಯವರಿಗೆ ಬರೆದು ಮನವಿ ಮಾಡಿಕೊಳ್ಳಲಾಗಿದೆ.

STATEMENT SHOWING THE DIFFERENCE BETWEEN THE COST EARLIER FIXED AND FINALLY FIXED AT INDUSTRIAL ESTATE MOODABIDRI

Sl. No.	Shed No.	Cost intimated earlier	Final cost fixed.
1	C–5	Rs. 2,23,040–00	Rs. 1,58,535–00
2	C–6	2,23,040–00	1,58,535–00
3	C–7	2,23,040–00	1,58,535–00
4	C–8	2,23,040–00	2,14,020–00
5	D–9	1,38,341–00	1,06,957–00
6	D–10	1,36,341–00	1,06,957–00
7	D–11	1,60,000–00	1,44,400–00
8	D–12	1,11,488–00	1,06,957–00

ಶಾಸನ ರಚನೆ

ವಿಧೇಯಕಗಳನ್ನು ಮಂಡಿಸುವುದು

1. 1990ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ)

ವಿಧೇಯಕ : ಮಂಡನೆಗೆ ಅನುಮತಿ ಕೋರಿಕೆ :

ಶ್ರೀ ಜಿ. ಪುಟ್ಟಸ್ವಾಮಿ ಗೌಡ : (ವ್ಯವಸಾಯ ಮತ್ತು ತೋಟಗಾರಿಕಾ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1990ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ